ಓ.ಎಸ್. 40/2024
ಪಿ. ಡಬ್ಲ್ಯೂ:03

<u>ದಿನಾಂಕ 22.07.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.</u>

<u>ಮುಖ್ಯ ವಿಚಾರಣೆ: ಶ್ರೀ ಎನ್.ಎಸ್.ಎ. ವಕೀಲರಿಂದ:</u>

ನಾನು ದಾವೆಯಲ್ಲಿ ವಾದಿಯ ಪರ 3 ನೇ ಸಾಕ್ಷಿದಾರನಾಗಿರುತ್ತೇನೆ. ಈಗ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ ಅದರಲ್ಲಿ ಬರೆದಿರುವ ವಿಚಾರಗಳು ನಾನು ಓದಿ ತಿಳಿದುಕೊಂಡಿರುತ್ತೇನೆ ಮತ್ತು ಅವುಗಳು ಸತ್ಯವಾಗಿದೆ ಎಂದು ನಾನು ಪ್ರಮಾಣೀಕರಿಸುತ್ತೇನೆ. ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರಕ್ಕೆ ನನ್ನ ಸಹಿಯನ್ನು ಹಾಕಿರುತ್ತೇನೆ.

ಸಾಕ್ಷಿಗೆ ನಿಪಿ-2 ದಾಖಲೆಯನ್ನು ತೋರಿಸಲಾಗಿ ಅದರಲ್ಲಿ ತನ್ನ ಸಹಿಯನ್ನು ಗುರುತಿಸಿರುತ್ತಾರೆ. ಸದರಿ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಸದರಿ ನಿಪಿ-2 ಕ್ಕೆ ಧನಂಜಯ ಎನ್ನುವವರು ಸಹ ಸಾಕ್ಷಿಯಾಗಿ ಸಹಿ ಹಾಕಿರುತ್ತಾರೆ. ಸಾಕ್ಷಿಯು ನಿಪಿ-2 ರಲ್ಲಿ 1 ಮತ್ತು 2 ನೇ ಪ್ರತಿವಾದಿಗಳ ಸಹಿಯನ್ನು ಸಹ ಗುರುತಿಸಿರುತ್ತಾರೆ.

ಸಾಕ್ಷಿಯು ಮುಂದುವರೆದು ವಾದಿಯ ಡಿ.ಪಿ. ಚಂದ್ರಶೇಖರಯ್ಯರವರ ಸಹಿಯನ್ನು ಸಹ ಗುರುತಿಸಿರುತ್ತಾರೆ.

ಸಾಕ್ಷಿಯು ವಾದಿ ಚಂದ್ರಶೇಖರಯ್ಯ ಮತ್ತು ಲಕ್ಷ್ಮಮ್ಮರವರ ಕುಟುಂಬದರವರ ನಡುವೆ ಸ.ನಂ. 37/3 ರಲ್ಲಿನ 4 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಕ್ರಯದ ವ್ಯವಹಾರ ಆಗಿದ್ದು ರೂ. 6,55,000/-ಕ್ಕೆ ಕ್ರಯ ಪತ್ರ

ಆಗಿರುತ್ತದೆ. ಸದರಿ ಕ್ರಯ ಪತ್ರಕ್ಕೆ ನಾನು ಮತ್ತು ಧನಂಜಯರವರು ಸಾಕ್ಷಿಗಳಾಗಿ ಸಹಿ ಹಾಕಿರುತ್ತೇವೆ.

1 ಮತ್ತು 2 ನೇ ಪರ ವಕೀಲರು ಗೈರು ಹಾಜರಿದ್ದು, ಪ್ರತಿವಾದ ಪತ್ರವನ್ನು ಸಲ್ಲಿಸಿರುವುದಿಲ್ಲ. ಆದುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ

ಸಹಿ/-
ಹಿರಿಯ ಶ್ರೇಣಿ ನ್ಯಾಯಾಧೀಶರು
ಗೌರಿಬಿದನೂರು.